Financial Assistance to a Co-operative Society in Tiptur taluk through the Apex Bank

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು)— ಆಧ್ಯಕ್ಷರೆ, ಮಾನ್ಯಮಂತ್ರಿಗಳು ಸೊಸೈಟಿಯ ಬಗ್ಗೆ ಒಂದು ಹೇಳಿಕೆ ಕೊಡಬೇಕಾಗಿತ್ತು.

† ಶ್ರೀ ಕೆ. ಎಚ್. ರಂಗನಾಥ್.—ಮಾನ್ಯಸದಸ್ಯರಿಗೆ ಗೊತ್ತಿರುವ ಹಾಗೆ ಆ ಕೋ ಆಪರೇಟೀವ್ ಸೊಸೈಟಿಯನ್ನು ಸಿಂಡಿಕೇಟ್ ಬ್ಯಾಂಕಿಗೆ ಸೇರಿಸಿದ್ದೆವು. ಅಲ್ಲಿ ಹೆಚ್ಚು ಸಾಲ ಕೊಡದೇ ಇದ್ದುದರಿಂದ ಆಪೆಕ್ಸ್ ಬಾಂಕಿನಿಂದ ನೇರವಾಗಿ ಕೊಡಬೇಕೆಂದು ಪ್ರಚಾರ ಮಾಡಿ ಕೊಡಿ ಎಂದು ಹೇಳಿದ್ದೆವು. ಆದರೆ ತಾಮಕೂರು ಜಿಲ್ಲೆಯ ಬ್ರಾಂಚು ಕುಣಿಗಲ್‌ನಲ್ಲಿ ಇದ್ದುದರಿಂದ ಹಿರಿಯೂರು ವ್ಯಯ ಹುಳಿಯಾರ್ ೩೦ ಮೈಲಿ ಬರುತ್ತದೆ ಅಲ್ಲಿ ಮಾಡಬೇಕು ಎಂದು ಹೀಗೆಂದು ಆಜ್ಞೆ ಮಾಡಿದೆ. ಆದರೆ ಇತ್ತೀಚೆಗೆ ಆಪೆಕ್ಸ್ ಬ್ಯಾಂಕ್ ಬೋರ್ಡಿನಲ್ಲಿ ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲ ಎಂದು ತಿಳಿದುಬಂದಿದೆ. ನಾನು ಈ ಬಗ್ಗೆ ರಿಜಿಸ್ಟ್ರಾರ್ ಅವರಿಗೆ ಹೇಳಿದ್ದೇನೆ. ಇನ್ನು ತಕ್ಷಣ ಸಾಲ ಕೊಡುವ ಬಗ್ಗೆ ವ್ಯವಸ್ಥೆ ಮಾಡಲಿಕ್ಕೆ ಹೇಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಆ ಸಿಂಡಿಕೇಟ್ ಬ್ಯಾಂಕ್ ಬಹಳ ಚೆನ್ನಾಗಿ ಫೈನಾನ್ಸ್ ಮಾಡುತ್ತಿದೆ.

ಶ್ರೀ ಕೆ. ಎಚ್. ರಂಗನಾಥ್ — ನಾವು ಯಾವ ಸಿಂಡಿಕೇಟ್ ಬ್ಯಾಂಕ್‌ಗೂ ಪರವಾಗಿಯೂ ಪ್ರಚಾರ ಮಾಡಂತಿಲ್ಲ ಅಥವಾ ಆಪೆಕ್ಸ್ ಬ್ಯಾಂಕ್ ಪರವಾಗಿಯೂ ಕ್ಯಾನ್‌ವಾಸ್ ಮಾಡುತ್ತಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.—ನಾನು ನನ್ನ ಕ್ಷೇತ್ರದ ಎಲ್ಲಾ ರೈತರ ಪರವಾಗಿ ಬಂದಿರುವುದರಿಂದ ಈಗ ಆದರ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ. ಸಿಂಡಿಕೇಟ್ ಬ್ಯಾಂಕ್ ಏನೂ ನಮ್ಮ ಮಾವನವರದಲ್ಲ, ಭಾವನವರದಲ್ಲ. ಅವರು ಕೆಲವು ಏರಿಯಾಗಳನ್ನು ಕೇಳಿದ್ದರು. ಆದಕ್ಕೆ ಸಹಕಾರ ಇಲಾಖೆಯ ಪರರು ಮೊದಲೇ ಒಪ್ಪಿಕೊಂಡಿದ್ದರು. ಆ ಏರಿಯಾಗಳನ್ನು ಸಮಗ್ರವಾಗಿ ಬಿಟ್ಟುಕೊಟ್ಟರೆ ಹೆಚ್ಚಿಗೆ ಫೈನಾನ್ಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಕೇಳಿಕೊಂಡಿದ್ದರು. ಈ ಮಧ್ಯೆ ಸಹಕಾರ ಇಲಾಖೆಯವರು ಏನೋ ಒಂದು ಕಾರಣದಿಂದ ಆ ಏರಿಯಾವನ್ನು ಬಿಟ್ಟುಕೊಡದೇ ಇದ್ದುದರಿಂದ ಸಿಂಡಿಕೇಟ್ ಬ್ಯಾಂಕಿನವರು ಫೈನಾನ್ಸ್ ಮಾಡುವುದನ್ನು ಈಗ ನಿಲ್ಲಿಸಿದ್ದಾರೆ. ಅವರು ಪುನಃ ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಮಾನ್ಯ ಮಂತ್ರಿಗಳಿಗೂ ಆ ಏರಿಯಾಗಳನ್ನೆಲ್ಲಾ ನಮಗೆ ಕೊಡಿಸಿ ಕೊಡಿ ಎಂದು ಕಾಗದ ಬರೆದುಕೊಟ್ಟಿದ್ದಾರೆ. ಡಿ.ಸಿ.ಸಿ. ಬ್ಯಾಂಕಿನವರಿಗಿಂತ ಹೆಚ್ಚಿನ ಹಣ ಸಹಾಯವನ್ನು ಕೊಡುತ್ತೇವೆಂದು ಆ ಬ್ಯಾಂಕಿನವರು ಹೇಳಿದೆ ಬಂದಿರುವುದರಿಂದ ಅವರ ಜೊತೆಯಲ್ಲಿ ಇವರೂ ವ್ಯವಹರಿಸಿ ಒಟ್ಟಿಗೆ ಸೇರಿ ಸಾಲ ಸೌಲಭ್ಯದ ಹಂಚಲಿಕ ರೈತರಿಗೆ ಸೂಕ್ತ ಪರಿಹಾರ ಸಿಗಲು ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಮಳೆ ಬುದಾಗ ಸಹಾಲದಲ್ಲಿ ರೈತರಿಗೆ ಸಾಲ ಕೊಡಬೇಕೇ ವಿನಃ ಬ್ಯಾಂಕಿನವರ ವ್ಯಾಜ್ಯವನ್ನು ತೀರಿಸುವುದಕ್ಕೋಸ್ಕರ ಇವತ್ತೂ ಸರ್ಕಾರ ಇಲ್ಲ. ಕಮರ್ಷಿಯಲ್ ಬ್ಯಾಂಕಿನಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ ಎಂದಲ್ಲ. ಸಾವಿರಾರು ಸೊಸೈಟಿಗಳನ್ನು ಯಾವ ಯಾವ ಬ್ಯಾಂಕುಗಳಿಗೆ ಕೊಟ್ಟಿದ್ದೇವೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಈ ಸಭೆಯಲ್ಲಿಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ನಾವು ಯಾವುದೇ ಬ್ಯಾಂಕಿನವರನ್ನು ಪ್ರೋತ್ಸಾಹ ಮಾಡುವುದಕ್ಕೆ ಇಲ್ಲಿಗೆ ಬಂದಿಲ್ಲ ಆಪೆಕ್ಸ್ ಬ್ಯಾಂಕ್ ಕೋ-ಆಪರೇಟೀವ್ ಬ್ಯಾಂಕ್ ಆಗಿರುವುದರಿಂದ, ನೇರವಾಗಿ ರೈತರಿಗೆ ಹಣ ಸಹಾಯ ಆಗಬೇಕಾಗಿದೆ ಎಂಬ ದೃಷ್ಟಿಯಿಂದ ಸೂಕ್ತವಾದ ಸೂಚನೆಗಳನ್ನು ಕೊಟ್ಟಿದ್ದೇವೆ. ಸಿಂಡಿಕೇಟ್ ಬ್ಯಾಂಕ್ ರೈತರಿಗೆ ಸಾಕಷ್ಟು ಸಹಾಯ ಮಾಡಿದ್ದರೆ ನಮಗೆ ಈ ತೊಂದರೆ ಬರುತ್ತಿರಲಿಲ್ಲ. ಸೊಸೈಟಿ ಕುಣಿಗಲ್‌ಗೆ ೫೦ ಮೈಲಿಗಳಷ್ಟು ದೂರವಿರುವುದರಿಂದ, ಹಿರಿಯೂರಿಗೆ ೩೦ ಮೈಲಿಗಳಷ್ಟು ಹತ್ತಿರವಿರುವುದರಿಂದ ಹಿರಿಯೂರಿನಲ್ಲಿಯೇ ನಾವು ಸಹಾಯವನ್ನು ತೆಗೆದುಕೊಳ್ಳುತ್ತೇವೆಂದು ಆ ಭಾಗದ ರೈತರು ಕೇಳಿಕೊಂಡಿದ್ದರಿಂದ ಆ ರೀತಿ ಮಾಡಿದ್ದೇವೆ ಆದ್ದರಿಂದ ಇವತ್ತು ಸಿಂಡಿಕೇಟ್ ಬ್ಯಾಂಕಿನವರೇ ಅವರಿಗೆ ಸಾಲ ಕೊಡುತ್ತೇವೆಂದು ಹೇಳಿದರೆ ಅವರೇ ಕೊಡಲಿ ಎಂದು ಆರ್ಡರ್ ಮಾಡುತ್ತೇನೆ. ಬಹು ಮುಖ್ಯವಾಗಿ ಅಲ್ಲಿ ಹೆಚ್ಚು ರೈತರಿಗೆ ಸಾಲವನ್ನು ಒದಗಿಸತಕ್ಕಂಥ ವ್ಯವಸ್ಥೆ ಆಗಬೇಕು, ಸುಮ್ಮನೆ ಅವರು 4-6 ಜನಗಳಿಗೆ ಮಾತ್ರ ಸಾಲ ಕೊಟ್ಟಿದೆವೆಂದು ಹೇಳಿದರೆ ಅದನ್ನು ಒಪ್ಪುವುದಕ್ಕೆ ನಾನು ತಯಾರಿಲ್ಲ.